# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೇಂಟ್/ಉಪಲೋಕ್/ಎಂ.ವೈ.ಎಸ್.9047/2017/ಉನಿವಿ-2 ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 20.11.2018.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ಪುತ್ತೂರು ನಗರಸಭಾ ವ್ಯಾಪ್ತಿಯ ಕಸಬಾ ಗ್ರಾಮದ ಕಾವೇರಿ ಕಟ್ಟೆ ದರ್ಬೆ ಬಡಾವಣೆಯ ಫ್ರಾನ್ಸಿಸ್ ಪ್ರವೀಣ್ ಪಿಂಟೋ ಅವರ ಆಸ್ತಿಯನ್ನು ಹೊರತುಪಡಿಸಿ ಉಳಿದ ಅತಿಕ್ರಮಣದಾರರಿಂದ ರಸ್ತೆಯ ಅತಿಕ್ರಮಣವನ್ನು ತೆರವುಗೊಳಿಸಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡುವ ಬಗ್ಗೆ.

*******

ಶ್ರೀ. ಬರ್ನಾರ್ಡ್ ರೋಷನ್ ಮಸ್ಕರೇನಸ್. ಮಾರಿಗೋಲ್ಡ್ ಹೋಂ, ಕಾವೇರಿಕಟ್ಟೆ, ದರ್ಬೆ, ಪುತ್ತೂರು, *ದಕ್ಷಿಣ ಕನ್ನಡ ಜಿಲ್ಲೆ,* (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) **ಶ್ರೀಮತಿ ರೂಪಾಶೆಟ್ಟಿ, ಆಯುಕ್ತರು,ಸಿಎಂಸಿ, ಪುತ್ತೂರು ಮತ್ತು** (2) **ಶ್ರೀ ಶ್ರೀಧರ ನಾಯಕ್, ಕಿರಿಯ ಅಭಿಯಂತರು, ಸಿವಿಲ್, ಸಿಎಂಸಿ, ಪುತ್ತೂರು, *ದಕ್ಷಿಣ ಕನ್ನಡ ಜಿಲ್ಲೆ,*** (ಇನ್ನು ಮುಂದೆ ಕ್ರಮವಾಗಿ 1 ಮತ್ತು 2ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ, ಪುತ್ತೂರು ನಗರಸಭಾ ವ್ಯಾಪ್ತಿಯ ಕಸಬಾ ಗ್ರಾಮದ ಸ.ನಂ.235/2ರಲ್ಲಿ 8 ಸೆಂಟ್ಸ್ ನಿವೇಶನದಲ್ಲಿ ಶ್ರೀ ಎ.ನವೀನ್ ಕುಮಾರ್ ಶೆಟ್ಟಿ ರವರು ಮನೆ ಕಟ್ಟಲು ನಕ್ಷೆಗೆ ತಾಂತ್ರಿಕ ಅನುಮೋದನೆ ಪಡೆದುಕೊಂಡು ನಗರಸಭೆಯಿಂದ

ಪರವಾನಿಗೆಯನ್ನು ಪಡೆದುಕೊಂಡಿರುತ್ತಾರೆ. ಎ.ಅಜಿತ್ ಕುಮಾರ್ ಶೆಟ್ಟಿ ಎನ್ನುವವರು ಸ.ನಂ.235/2ರಲ್ಲಿ 5 ಸೆಂಟ್ಸ್ ನಿವೇಶನದಲ್ಲಿ ಪುತ್ತೂರು ಯೋಜನಾ ಪ್ರಾಧಿಕಾರದಿಂದ ನಕ್ಷೆಗೆ ತಾಂತ್ರಿಕ ಅನುಮೋದನೆ ಪಡೆದುಕೊಂಡು ನಗರಸಭೆಯಿಂದ ಮನೆಕಟ್ಟಲು ಅನುಮತಿ ಪಡೆದುಕೊಂಡಿರುತ್ತಾರೆ. ಸದರಿ ಮನೆಗಳು ಕಾವೇರಿ ಕಟ್ಟೆ ದರ್ಬೆ ಬಡಾವಣೆಯಲ್ಲಿದ್ದು, ಸದರಿ ಬಡಾವಣೆಯ 4.5 ಮೀಟರ್ ಅಗಲದ ರಸ್ತೆಯ ಪಕ್ಕದಲ್ಲಿ ನವೀನ್ ಕುಮಾರ್ ಶೆಟ್ಟಿ ಮತ್ತು ಅಜಿತ್ ಕುಮಾರ್ ಶೆಟ್ಟಿ ಇವರ ನಿವೇಶನಗಳು ಬರುತ್ತವೆ. ಯೋಜನಾ ಪ್ರಾಧಿಕಾರ, ಪುತ್ತೂರು, ನೀಡಿದ ಅನುಮೋದಿತ ನಕ್ಷೆಯಲ್ಲಿ ರಸ್ತೆಯ ಮಾರ್ಜಿನ್‌ಗಾಗಿ ತಿಳಿಸಲಾದ 1.5 ಮೀಟರ್ ಅಗಲದ ಜಾಗವನ್ನು ಪರಿತ್ಯಾಜ್ಯ ಪತ್ರದ ಮೂಲಕ ನಗರಸಭೆಗೆ ಬರೆದುಕೊಡಬೇಕಾಗುತ್ತದೆ. ಆದರೆ ನವೀನ್ ಕುಮಾರ್ ಶೆಟ್ಟಿ ಮತ್ತು ಅಜಿತ್ ಕುಮಾರ್ ಶೆಟ್ಟಿ ಇವರು ರಸ್ತೆ ಮಾರ್ಜಿನ್‌ಗೆ ಜಾಗವನ್ನು ಬಿಡದೆ ಬಡಾವಣೆ ರಸ್ತೆಯಲ್ಲಿ ಕೂಡ ಅತಿಕ್ರಮಣ ಮಾಡಿ ಮನೆ ಕಟ್ಟುತ್ತಿದ್ದಾರೆ. ಆದುದರಿಂದ ಬಡಾವಣೆಯ ರಸ್ತೆಯನ್ನು ಅಭಿವೃದ್ಧಿಗೊಳಿಸಲು ಸಾಧ್ಯವಾಗುವುದಿಲ್ಲ ಮತ್ತು ಸಾರ್ವಜನಿಕರಿಗೆ ಅನಾನುಕೂಲವಾಗುತ್ತದೆ. ಎದುರುದಾರರಿಗೆ ಅನೇಕ ಬಾರಿ ದೂರು ನೀಡಿದರೂ ಕೂಡ ಎದುರುದಾರರು ರಸ್ತೆ ಅತಿಕ್ರಮಣ ಮಾಡಿ ಕಟ್ಟಿದ ಜಾಗವನ್ನು ತೆರವುಗೊಳಿಸಲು ಯಾವುದೇ ಕ್ರಮಕೈಗೊಂಡಿಲ್ಲ. ಆದ್ದರಿಂದ ಎದುರುದಾರರು ಕರ್ತವ್ಯಲೋಪವೆಸಗಿರುತ್ತಾರೆಂದು ಆಪಾದಿಸಿರುತ್ತಾರೆ.

ದೂರಿನ ಜೊತೆಗೆ ನವೀನ್ ಕುಮಾರ್ ಶೆಟ್ಟಿ ಮತ್ತು ಅಜಿತ್ ಕುಮಾರ್ ಶೆಟ್ಟಿ ಅವರಿಗೆ ಯೋಜನಾ ಪ್ರಾಧಿಕಾರದಿಂದ ಕಟ್ಟಡದ ನಕ್ಷೆಗೆ ಮಂಜೂರಾತಿ ನೀಡಿದ ದಾಖಲೆಯನ್ನು ಹಾಜರುಪಡಿಸಿರುತ್ತಾರೆ.

3. 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಗಳಲ್ಲಿ ದೂರಿನಲ್ಲಿ ಅವರ ವಿರುದ್ಧ ಮಾಡಿದ ಆಪಾದನೆಗಳನ್ನು ಅಲ್ಲಗಳೆದು, ನವೀನ್ ಕುಮಾರ್ ಶೆಟ್ಟಿ ಮತ್ತು ಅಜಿತ್ ಕುಮಾರ್ ಶೆಟ್ಟಿ ಅವರು ಕಟ್ಟಡ ನಿರ್ಮಾಣ ಮಾಡಲು ಪುತ್ತೂರು ಯೋಜನಾ ಪ್ರಾಧಿಕಾರ ಇವರಿಂದ ದಿ.25.1.2017ರಂದು ನಕ್ಷೆಗೆ ತಾಂತ್ರಿಕ ಅನುಮೋದನೆ ಪಡೆದುಕೊಂಡಿದ್ದು, ಸದರಿ ಅನುಮೋದನೆಯಂತೆ ನಗರಸಭೆಯಿಂದ ಕಟ್ಟಡ ನಿರ್ಮಾಣ ಪರವಾನಿಗೆಯನ್ನು

N. Anand

(151)

ನೀಡಲಾಗಿರುತ್ತದೆ. ಸದರಿ ಪರವಾನಿಗೆಯನ್ನು ನೀಡುವಾಗ ರಸ್ತೆ ಅಗಲೀಕರಣಕ್ಕಾಗಿ 14.00 * 1.50 ಮೀಟರ್ ಜಾಗವನ್ನು ಪರಿತ್ಯಾಜ್ಯ ಪತ್ರದ ಮೂಲಕ ನವೀನ್ ಕುಮಾರ್ ಶೆಟ್ಟಿ ಅವರಿಂದ ಮತ್ತು 12.60 * 1.50 ವಿಸ್ತೀರ್ಣದ ಜಾಗವನ್ನು ನೋಟರಿ ಪ್ರಮಾಣ ಪತ್ರದ ಮೂಲಕ ಅಜಿತ್ ಕುಮಾರ್ ಶೆಟ್ಟಿ ಅವರಿಂದ ನಗರಸಭೆಗೆ ಪಡೆಯಲಾಗಿದೆ. ದೂರಿನಲ್ಲಿ ಹೇಳಿದಂತೆ ರಸ್ತೆಯ ಅಭಿವೃದ್ಧಿಗೆ ಚ್ಯುತಿ ಬಾರದಂತೆ ಕ್ರಮತೆಗೆದುಕೊಂಡಿರುತ್ತಾರೆ. ಮತ್ತು ಮೇಲ್ಕಂಡವರಿಗೆ ಕಟ್ಟಡ ಪರವಾನಿಗೆ ನೀಡುವ ಪೂರ್ವದಲ್ಲಿ ರಸ್ತೆ ಅಗಲೀಕರಣಕ್ಕೆ ಮೀಸಲಿಟ್ಟ ಜಾಗವನ್ನು ನಗರಸಭೆ ಪಡೆದುಕೊಂಡಿರುವುದರಿಂದ ಮುಂದಿನ ರಸ್ತೆ ಅಭಿವೃದ್ಧಿಗೆ ಯಾವುದೇ ಅಡಚಣೆಯುಂಟಾಗುವುದಿಲ್ಲವೆಂದು ತಿಳಿಸಿ ಈ ಪ್ರಕರಣದಿಂದ ಅವರನ್ನು ಕೈಬಿಡಬೇಕೆಂದು ಕೋರಿಕೊಂಡಿರುತ್ತಾರೆ. ಎದುರುದಾರರು ತಮ್ಮ ಆಕ್ಷೇಪಣೆಯ ಜೊತೆಗೆ ನವೀನ್ ಕುಮಾರ್ ಶೆಟ್ಟಿ ಮತ್ತು ಅಜಿತ್ ಕುಮಾರ್ ಶೆಟ್ಟಿ ಅವರು ಬರೆದುಕೊಟ್ಟ ಪರಿತ್ಯಾಜ್ಯ ಪತ್ರದ ಜೆರಾಕ್ಸ್ ಪ್ರತಿಗಳನ್ನು ಹಾಗೂ ನವೀನ್ ಕುಮಾರ್ ಶೆಟ್ಟಿ ಯ ಅನುಮೋದಿತ ನಕ್ಷೆಯ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನಲ್ಲಿ ತಿಳಿಸಿದ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ.

5. ದಿ.27.1.2018ರಂದು ಪುತ್ತೂರು ಕ್ಯಾಂಪಿನಲ್ಲಿ ವಿಚಾರಣೆಯ ಸಂದರ್ಭದಲ್ಲಿ ದೂರುದಾರರು ರಸ್ತೆಯ ಅಗಲ 4.2 ಮೀಟರ್ ಇದೆ ಆದರೆ ರಸ್ತೆಯ ಪಕ್ಕದವರು ರಸ್ತೆ ಮೇಲೆ ಅತಿಕ್ರಮಣ ಮಾಡಿದ್ದರಿಂದ ರಸ್ತೆಯ ಅಗಲ ಈಗ 3 ಮೀಟರ್ ಇದೆಯೆಂದು ತಿಳಿಸಿರುತ್ತಾರೆ. 1ನೇ ಎದುರುದಾರರು ರಸ್ತೆಯ ಪಕ್ಕದಲ್ಲಿ ಆ ರೀತಿ ಸುಮಾರು 15 ಕಟ್ಟಡಗಳಿದ್ದು, ರಸ್ತೆಯ ಅಗಲ 4.2 ಮೀಟರ್ ಇರುತ್ತದೆಂದು ಒಪ್ಪಿಕೊಂಡಿರುತ್ತಾರೆ. ಮತ್ತು ಪ್ರಸ್ತುತ ರಸ್ತೆಯ ಅಗಲ 3 ಮೀಟರ್‌ಗೆ ಇಳಿಕೆಯಾಗಿದೆಯೆಂದು ತಿಳಿಸಿರುತ್ತಾರೆ. ಆ ಸಂದರ್ಭದಲ್ಲಿ 1ನೇ ಎದುರುದಾರರು ರಸ್ತೆ ವಿಸ್ತೀರ್ಣವನ್ನು ಸರ್ವೆ ಮಾಡಿ ಮತ್ತು ರಸ್ತೆಯ ಅಗಲವನ್ನು ದಾಖಲೆಗಳಲ್ಲಿದ್ದಂತೆ ಮಾಡಲು ಸೂಕ್ತ ಕ್ರಮಕೈಗೊಳ್ಳುವುದಾಗಿಯೂ ತಿಳಿಸಿ ವರದಿ ಸಲ್ಲಿಸುವುದಾಗಿ ತಿಳಿಸಿದ್ದರು.

N. Ananda

6. 1ನೇ ಎದುರುದಾರರು ತಮ್ಮ ವರದಿ ದಿ. 26.2.2018ನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ ಪುತ್ತೂರು ನಗರಸಬಾ ವ್ಯಾಪ್ತಿಯ ರಸ್ತೆ ಒತ್ತುವರಿ ತೆರವುಗೊಳಿಸಲು 8.2.2018ರಂದು ಒತ್ತುವರಿ ಮಾಡಿದವರಿಗೆ ನೋಟೀಸು ನೀಡಲಾಗಿದ್ದು, ಆಗ ಅನೇಕರು ತಮ್ಮ ವಕೀಲರ ಮುಖಾಂತರ ಉತ್ತರ ನೋಟೀಸ್ ನೀಡಿರುತ್ತಾರೆ. ಹಾಗೂ ಫ್ರಾನ್ಸಿಸ್ ಪ್ರವೀಣ್ ಪಿಂಟೋ ಎನ್ನುವವರು ನ್ಯಾಯಾಲಯದಲ್ಲಿ ದೂರು ಸಲ್ಲಿಸಿರುತ್ತಾರೆಂದು ತಿಳಿಸಿರುತ್ತಾರೆ. ತಮ್ಮ ವರದಿಯ ಜೊತೆಗೆ ಫ್ರಾನ್ಸಿಸ್ ಪ್ರವೀಣ್ ಪಿಂಟೋ ಎನ್ನುವವರು ಪುತ್ತೂರು ನ್ಯಾಯಾಲಯದಲ್ಲಿ ದಾಖಲಿಸಿದ ಒ.ಎಸ್.85/2018ರಲ್ಲಿಯ ವಾದಪತ್ರದ ನಕಲನ್ನು ಮತ್ತು ಮಧ್ಯಂತರ ಅರ್ಜಿ-2ರ ಮೇಲೆ ವಿವಾದಿತ ಸ್ಥಳದಲ್ಲಿ ಯಥಾಸ್ಥಿತಿಯನ್ನು ಕಾಯ್ದುಕೊಂಡು ಹೋಗುವ ಆದೇಶದ ಜೆರಾಕ್ಸ್ ಪ್ರತಿಯನ್ನು ಹಾಗೂ ಇನ್ನೂ ಹಲವಾರು ಜನರು ವಕೀಲರ ಮೂಲಕ ನೀಡಿದ ನೋಟೀಸಿನ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ.

7. ದೂರು, ಆಕ್ಷೇಪಣೆ, ಪ್ರತ್ಯುತ್ತರ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ ದೂರುದಾರರು ದರ್ಬೆ ಕಾವೇರಿ ಕಟ್ಟೆ ರಸ್ತೆ ವಿಸ್ತೀರ್ಣ 4.5 ಮೀಟರ್ ಇದೆಯೆಂದು ದೂರಿನಲ್ಲಿ ತಿಳಿಸಿರುತ್ತಾರೆ. ಪೂರಕವಾಗಿ ಪುತ್ತೂರು ಯೋಜನಾ ಪ್ರಾಧಿಕಾರದವರು ಕಟ್ಟಡದ ನಕ್ಷೆಗೆ ನೀಡಿದ ಮಂಜೂರಾತಿ ಪಟ್ಟಿಯಲ್ಲಿ ಹಾಲಿ ರಸ್ತೆ ಅಗಲ $4^{1/2}$ ಮೀಟರ್ ಎಂದು ತೋರಿಸಿರುತ್ತಾರೆ. ಸದರಿ ದಾಖಲೆಯನ್ನು ಫ್ಲಾಗ್-ಎ ಎಂದು ಗುರುತಿಸಲಾಯಿತು. ಎದುರುದಾರರು ಹಾಜರುಪಡಿಸಿದ ಅನುಮೋದಿತ ನಕ್ಷೆಯಲ್ಲಿ ಕೂಡ ಕಾವೇರಿಕಟ್ಟೆ ದರ್ಬೆ ರಸ್ತೆಯ ಅಗಲ 4.5 ಮೀಟರ್ ಎಂದು ತೋರಿಸಲಾಗಿದೆ. ಅದೇ ರೀತಿ ಪುತ್ತೂರು ನಗರ ಯೋಜನಾ ಪ್ರಾಧಿಕಾರದವರು ನವೀನ್ ಕುಮಾರ್ ಶೆಟ್ಟಿ ಮತ್ತು ಅಜಿತ್ ಕುಮಾರ್ ಶೆಟ್ಟಿ ಅವರಿಗೆ ನೀಡಿದ ಅನುಮೋದಿತ ನಕ್ಷೆಯಲ್ಲಿ 4.5 ಮೀಟರ್ ಅಗಲದ ರಸ್ತೆಯ ಪಕ್ಕದಲ್ಲಿ 1.50 ಮೀಟರ್ ಅಗಲದ ರಸ್ತೆ ಮಾರ್ಜಿನನ್ನು ಬಿಡಬೇಕೆಂದು ತಿಳಿಸಿರುತ್ತಾರೆ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ನವೀನ್ ಕುಮಾರ್ ಶೆಟ್ಟಿ ಮತ್ತು ಅಜಿತ್ ಕುಮಾರ್ ಶೆಟ್ಟಿ ಅವರು ತಮ್ಮ ನಿವೇಶನದ ಪಕ್ಕದಲ್ಲಿರುವ ರಸ್ತೆ ಮಾರ್ಜಿನ್‌ಗಾಗಿ 14.00 * 1.50 ಮೀಟರ್ ವಿಸ್ತೀರ್ಣ ಮತ್ತು 12.60 * 1.50 ಮೀಟರ್ ಜಾಗವನ್ನು ನಗರಸಭೆಗೆ ದಾನಪತ್ರ ಬರೆದುಕೊಡುವ

N. [signature]

ಮೂಲಕ ಬಿಟ್ಟುಕೊಟ್ಟಿರುತ್ತಾರೆ. ನಂತರದಲ್ಲಿ ಅವರಿಗೆ ಮನೆ ಕಟ್ಟಲು ಅನುಮತಿ ನೀಡಿರುತ್ತದೆಂದು ಮತ್ತು ಹಾಲಿ ಈಗ ಅವರು ಮನೆ ಕಟ್ಟಿರುತ್ತಾರೆಂದು ತಿಳಿಸಿರುತ್ತಾರೆ.

8. ಎದುರುದಾರರು ದಿ.27.1.2018ರಂದು, ಪುತ್ತೂರು ಕ್ಯಾಂಪಿನಲ್ಲಿ ಮಾನ್ಯ ಉಪಲೋಕಾಯುಕ್ತರ ಸಮ್ಮುಖದಲ್ಲಿ ವಿಚಾರಣೆಯ ಸಂದರ್ಭದಲ್ಲಿ ಕಾವೇರಿಕಟ್ಟೆ ದರ್ಬೆ ರಸ್ತೆಯ ಅಗಲ 3 ಮೀಟರ್ ಇದೆಯೆಂದು ಒಪ್ಪಿಕೊಂಡಿರುತ್ತಾರೆ. ಸದರಿ ಒತ್ತುವರಿಯನ್ನು ತೆರವುಗೊಳಿಸಿ ವರದಿ ಸಲ್ಲಿಸುವುದಾಗಿ ತಿಳಿಸಿದ್ದರು.

9. 1ನೇ ಎದುರುದಾರರು ದಿ.26.2.2018ರ ತಮ್ಮ ವರದಿ ಸಲ್ಲಿಸಿದ್ದು, ವರದಿಯಲ್ಲಿ ಒತ್ತುವರಿದಾರರಿಗೆ ಒತ್ತುವರಿ ತೆರವುಗೊಳಿಸಲು ನೋಟೀಸ್ ನೀಡಿದಾಗ, ಒತ್ತುವರಿದಾರರಾದ ಫ್ರಾನ್ಸಿಸ್ ಪ್ರವೀಣ್ ಪಿಂಟೋ ಅವರು ನ್ಯಾಯಾಲಯದಲ್ಲಿ ದಾವೆ ದಾಖಲಿಸಿ, ಒತ್ತುವರಿ ತೆರವುಗೊಳಿಸಬಾರದೆಂದು ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ಪಡೆದಿರುತ್ತಾರೆ ಹಾಗೂ ಉಳಿದವರು ವಕೀಲರ ಮೂಲಕ ಉತ್ತರ ನೋಟೀಸ್ ನೀಡಿ ಅತಿಕ್ರಮಣವೆಂದು ಸೂಚಿಸಲಾದ ಜಾಗಗಳು ತಮ್ಮ ಹಕ್ಕಿನ ಜಾಗಗಳೆಂದು ತಿಳಿಸಿರುತ್ತಾರೆಂದು ಹೇಳಿರುತ್ತಾರೆ. 1ನೇ ಎದುರುದಾರರು ತಮ್ಮ ವರದಿಯ ಜೊತೆಗೆ ಯಶವಂತ್ ಗೌಡ, ವಕೀಲರು, ಶ್ರೀಮತಿ ಪುಷ್ಪಾ, ಕೋಂ ಲೇಟ್ ಚಂದ್ರಶೇಖರ್, ಭರತ್ ಕೆ.ಸಿ. ಮತ್ತು ಜಿ.ವೆಂಕಟರಮಣ ಭಟ್ ಪರವಾಗಿ, ಶ್ರೀ ಸತೀಶ್ ಪ್ರಭು ವಕೀಲರು, ಹರೀಶ್ ಪೈ ಬಿನ್ ಲೇಟ್ ಮಹಲಿಂಗ ಪೈ, ನಾಗೇಶ್ ಪೈ ಬಿನ್ ಲೇಟ್ ಮಹಲಿಂಗ್ ಪೈ, ಉಷಾ ವಿ.ಭಟ್,ಕೋಂ ಬಿ.ವೆಂಕಟೇಶ್ ಭಟ್ ಪರವಾಗಿ, ಶ್ರೀ ಚಿದಾನಂದ ಬೈಲಾಡಿ, ವಕೀಲರು, ಬಿಪಾತುಮ್ಮ ಕೋಂ ಮಹಮದ್, ಐರಿನ್ ಇ.ಫರ್ನಾಂಡಿಸ್ ಕೋಂ ಎಡ್ವರ್ಡ್ ಫರ್ನಾಂಡಿಸ್, ಕ್ಲೆಮೇರಿತ ಜೋಸೆಫಿನ್, ಮಸ್ಕರೆಸ್, ಕೆ.ವಸಂತಿ ಕೋಂ ಸೀತಾರಾಂ, ಸುಜಾತ ಸುರೇಶ್, ಅಜಿತ್ ಕುಮಾರ್ ಶೆಟ್ಟಿ, ಪಾರ್ವತಿ ಕೋಂ ನಾರಾಯಣ ಆಚಾರ್ಯ, ನವೀನ್ ಕುಮಾರ್ ಶೆಟ್ಟಿ, ಫಿಲಿಪ್ ಮಸ್ಕರೆಸ್ ಪರವಾಗಿ ಉತ್ತರ ನೋಟೀಸ್ ನೀಡಿ 1ನೇ ಎದುರುದಾರರು ದಿ.8.2.2018ರಂದು ನೀಡಿದ ನೋಟೀಸಿನ ಅಂಶಗಳನ್ನು ಅಲ್ಲಗಳೆದಿರುತ್ತಾರೆ.

N. Ananda

10. 1ನೇ ಎದುರುದಾರರು ಪ್ರಾನ್ಸಿಸ್ ಪ್ರವೀಣ್ ಪಿಂಟೋ ಅವರು ಮತ್ತೂರು ನ್ಯಾಯಾಲಯದಲ್ಲಿ ಒ.ಎಸ್.85/2018ರಲ್ಲಿ ಮಧ್ಯಂತರ ಅರ್ಜಿ ಸಲ್ಲಿಸಿ ಪಡೆದ ತಾತ್ಕಾಲಿಕ ನಿಬಂಧಕಾಜ್ಞೆ ಆದೇಶವನ್ನು ಹಾಜರುಪಡಿಸಿರುತ್ತಾರೆ. ಸದರಿ ದಾವೆಯಲ್ಲಿ ಈ ಪ್ರಕರಣದ ದೂರುದಾರರು 1ನೇ ಪ್ರತಿವಾದಿ ಮತ್ತು ಈ ಪ್ರಕರಣದ 1ನೇ ಎದುರುದಾರರನ್ನು 2ನೇ ಪ್ರತಿವಾದಿಯಾಗಿರುತ್ತಾರೆ.

11. ಒ.ಎಸ್.85/2018 ದಾವೆಯನ್ನು ಪ್ರಾನ್ಸಿಸ್ ಪಿಂಟೋ ಎನ್ನುವವರು ಆತನ ಆಸ್ತಿಯ ವಹಿವಾಟಕ್ಕೆ ಎದುರುದಾರರು ತೊಂದರೆ ಕೊಡಬಾರದೆಂದು ಶಾಶ್ವತ ನಿರ್ಬಂಧಕಾಜ್ಞೆಗಾಗಿ ಸಲ್ಲಿಸಿರುತ್ತಾರೆ. ಆದರೆ ನವೀನ್ ಕುಮಾರ್ ಶೆಟ್ಟಿ ಆಗಲೀ ಅಜಿತ್ ಕುಮಾರ್ ಶೆಟ್ಟಿಯಾಗಲೀ ಮತ್ತು ಇತರೆಯವರು ಎದುರುದಾರರ ವಿರುದ್ಧ ದಾವೆ ಹೂಡಿರುವುದಿಲ್ಲ. ಎದುರುದಾರರು ಮೇಲ್ಕಂಡವರು ವಕೀಲರ ಮೂಲಕ ನೋಟೀಸ್ ನೀಡಿರುತ್ತಾರೆಂದು ತಿಳಿಸಿ ಯಾವುದೇ ಕ್ರಮಕೈಗೊಂಡಿರುವುದಿಲ್ಲ. ಆದ್ದರಿಂದ ಫ್ರಾನ್ಸಿಸ್ ಪ್ರವೀಣ್ ಪಿಂಟೋ ಅವರನ್ನು ಹೊರತುಪಡಿಸಿ ಉಳಿದ ಅತಿಕ್ರಮಣದಾರರ ವಿರುದ್ಧ ಕ್ರಮಕೈಗೊಳ್ಳಲು ಅಥವಾ ಅತಿಕ್ರಮಣ ತೆರವುಗೊಳಿಸಲು ಎದುರುದಾರರಿಗೆ ಯಾವುದೇ ಅಡಚಣೆ ಇರುವುದಿಲ್ಲ. ಆದರೂ ಕೂಡ ಅತಿಕ್ರಮಣದಾರರು ನೋಟೀಸ್ ನೀಡಿರುತ್ತಾರೆಂದು ಹೇಳಿ ಕಾಲಹರಣ ಮಾಡಿ ತಮ್ಮ ಕರ್ತವ್ಯದಿಂದ ತಪ್ಪಿಸಿಕೊಳ್ಳಲು ಎದುರುದಾರರು ವರದಿಯನ್ನು ನೀಡಿರುತ್ತಾರೆ.

12. Sec.87 of Karnataka Municipalities Act 1964 provides that –

> " *It shall be incumbent on every municipal council to make adequate provision by any means or resources which it may lawfully use or take for each of the following matters within the municipal areas, viz.,*
>
> *f) removing obstructions and projections in public streets, bridges and other public places and in spaces not being private property, which are open to the enjoyment of the public whether such spaces are vested in the municipal council or belong to the Govt.*

N. Anand

13. ಪ್ರಸ್ತುತ ಪ್ರಕರಣದಲ್ಲಿ ಪುತ್ತೂರು ನಗರಸಭಾ ವ್ಯಾಪ್ತಿಯಲ್ಲಿ ಬರುವ ಕಾವೇರಿಕಟ್ಟೆ ದರ್ಬೆ ಬಡಾವಣೆ ರಸ್ತೆಯಲ್ಲಿ ಅಕ್ಕಪಕ್ಕದವರು ಅತಿಕ್ರಮಣ ಮಾಡಿದ್ದು ಎದುರುದಾರರು ಒಪ್ಪಿಕೊಂಡಿರುತ್ತಾರೆ. ಆದರೆ ಎದುರುದಾರರು ಸದರಿ ರಸ್ತೆ ಅತಿಕ್ರಮಣವನ್ನು ತೆರವುಗೊಳಿಸಿರುವುದಿಲ್ಲ.

14. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಪುತ್ತೂರು ನಗರಸಭಾ ವ್ಯಾಪ್ತಿಯ ಕಸಬಾ ಗ್ರಾಮದ ಕಾವೇರಿ ಕಟ್ಟೆ ದರ್ಬೆ ಬಡಾವಣೆಯ ಫ್ರಾನ್ಸಿಸ್ ಪ್ರವೀಣ್ ಪಿಂಟೋ ಅವರ ಆಸ್ತಿಯನ್ನು ಹೊರತುಪಡಿಸಿ ಉಳಿದ ಅತಿಕ್ರಮಣದಾರರಿಂದ ರಸ್ತೆಯ ಅತಿಕ್ರಮಣವನ್ನು ತೆರವುಗೊಳಿಸಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

15. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಮೂರ್ತಿ ಎನ್.ಆನಂದ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.